"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 26] ಸೋಮವಾರ 29–10–45 [ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಆರೋಗ್ಯವು ಕೆಡುವುದರಿಂದ ಕಷ್ಟಗಳು ಕಾಣತ್ತವೆ ಆರ್ಥಿಕ ಸ್ಥಿತಿ ಸಾಧಾರಣವಾಗಿರತ್ತದೆ.

ವೃಷಭ— ವ್ಯವಹಾರ ಆರೋಗ್ಯ ಸಂಪತ್ತು ಈ ಮೂರರಲ್ಲಿಯೂ ನಿಮಗೆ ಈ ವಾರದಲ್ಲಿ ಯಾವ ಒಗೆಯ ಹಾನಿಯೂ ಇರುವುದಿಲ್ಲ.

ಮಿಥುನ— ಖರ್ಚು ಹೆಚ್ಚು. ಜೋಗ್ರತೆಯಿಂದಿರಿ ವ್ಯವಹಾರದಲ್ಲಿ ಯಶ.

ಕರ್ಕಾಟಕ — ಆರೋಗ್ಯ ಕೆಟ್ಟೀತು ದುಡ್ಡಿನ ತಾಪತ್ರಯ, ವ್ಯವಹಾರದಲ್ಲಿ ಶತ್ರುಭಯವೂ ಕಾಣಬರುತ್ತದೆ. ಮನಸ್ಸು ಸ್ಥಿಮಿತವಾಗಿರುವುದಿಲ್ಲ.

ಸಿಂಹ— ದೇಹ ಸಂಬಂಧವಾದ, ಹಣಸಂಬಂಧವಾದ, ವ್ಯವಹಾರ ಸಂಬಂಧವಾದ ಯಾವ ತೊಂದರೆಯೂ ಯಾವ ತಾಪತ್ರಯವೂ ಇರುವುದಿಲ್ಲ.

ಕನ್ಯ— ಆಕಸ್ಮಿಕ ಧನಲಾಭವಾಗುವ ಯೋಗವಿದೆ. ಆರೋಗ್ಯವು ಚೆನ್ನಾಗಿರುತ್ತದೆ ವ್ಯವಹಾರದಲ್ಲಿ ಜಯವು ಲಭಿಸುತ್ತದೆ ಮನಸ್ಸು ಪ್ರಸನ್ನವಾಗುತ್ತದೆ

ತುಲ— ಚಿತ್ತವು ಹರ್ಷದಿಂದ ಕೂಡಿರುತ್ತದೆ. ದೇಹವು ನಿರೋಗವಾಗಿರುತ್ತದೆ ಆರ್ಥಿಕಸ್ಥಿತಿಯು ತೃಪ್ತಿಕರವಾಗಿರುತ್ತದೆ. ವ್ಯವಹಾರದಲ್ಲಿ ಅನುಕೂಲವಿದೆ.

ವೃಶ್ಚಿಕ— ಎಲ್ಲ ವಿಧದ ತಾಪತ್ರಯಗಳೂ ನಿಮ್ಮಿಂದ ಮಾಯವಾಗುತ್ತವೆ ಮನಸ್ಸು ದಾನಧರ್ಮಗಳ ಕಡೆ ಹೋಗುತ್ತದೆ.

ಧನಸ್ಸು— ಆರೋಗ್ಯ ವಿಷಯದಲ್ಲಿ ಚಾಗರೂಕರಾಗಿರಿ. ಮನಸ್ಸನ್ನು ಸಚ್ಚಿಂತನೆಯಲ್ಲಿ ನಲೆಗೊಳಿಸಿರಿ. ಆರ್ಥಿಕ ಸ್ಥಿತಿ ಸಾಧಾರಣವಾಗಿರುತ್ತದೆ.

ಮಕರ— ಮನಸ್ಸು ಕಳವಳಪೂರಿತವಾಗಿರುತ್ತದೆ. ಆರೋಗ್ಯವು ನೆಟ್ಟಗಿರುತ್ತದೆ. ಹಣಕಾಸಿನ ಸ್ಥಿತಿ ತಕ್ಕವಟ್ಟಿಗೆ

ಕುಂಭ— ಸ್ವಲ್ಪ ಕಷ್ಟಗಳಿಂದ ಕೂಡಿದ ವಾರ. ಹೆದರಬೇಡಿ. ಪುರುಷಾತ್ಮನ ಚಿಂತನೆ ಮಾಡಿ.

ಮೀನ— ವ್ಯವಹಾರದಲ್ಲಿ ಉತ್ಸಾಹವಂತರಾಗಿರುತ್ತೀರಿ. ಮನಸ್ಸು ಸ್ಥಿಮಿತವಾಗಿರುತ್ತದೆ. ಆರೋಗ್ಯ ಚೆನ್ನಾಗಿರುತ್ತದೆ.

ಬಂಗಾಳದಲ್ಲಿ ಬಟ್ಟೆ ಬರ

(ಅಲ್ಲಿಯ ಕಿಸಾನ್ ಸಂಘದ ಕಾರ್ಯದರ್ಶಿ ಹೇಳಿಕೆಯಂತೆ)

ಒಬ್ಬ ಕೂಲಿ ಮಾಡುವ ಹೆಂಗಸು ಉಡಲು ಚೀರೆಯಿಲ್ಲದೆ, ದಿಗ್ಬಂಧನಾಗಿ ತಿರುಗಲಾರದೆ ಒಂಭತ್ತು ತಿಂಗಳು ಹೊತ್ತ ಹೆತ್ತ ಮಗುವನ್ನು ಮಾರಿಕೊಂಡ ಘಳಂತೆ ಮಾನವನ್ನು ಮುಚ್ಚಿಕೊಳ್ಳಲು ಬಟ್ಟೆಯನ್ನು ಸಂಪಾದಿಸಲು ಹೀಗೆ ಮಾಡಿದಳು.

ಡಾಕ್ಟರುಗಳು ಕೆಲವೆಡೆಗಳಲ್ಲಿ ಹೆಂಗಸರನ್ನು ಪರೀಕ್ಷಿಸಬೇಕಾಗಿ ಬಂದಾಗ ಅವರು ಮನೆಗಳಿಗೆ ಹೋಗಬೇಕಾದಾಗ, ಮೊದಲು ತಾವು ಬಂದಿರುವ ಏಷಯವನ್ನು ಹೇಳಿಕಳುಹಿಸಿ ಮನೆಗಳನ್ನು ಪ್ರವೇಶಿಸುವರಂತೆ. ಕೆಲವೆಡೆಗಳಲ್ಲಿ ಅತ್ತೆ ಸೊಸೆಯರಿಬ್ಬರಿಗೂ ಒಂದೇ ಸೀರೆ ಇರುವುದಂತೆ ಆದುದರಿಂದ ಡಾಕ್ಟರರು ಒಂದರೆಂದು ತಿಳಿದಾಗ ಸೀರೆಯನ್ನುಟ್ಟುಕೊಂಡು ಅವರಿಗೆ ಕಾಣಿಸಿಕೊಳ್ಳುವರಂತೆ

ಅಂತೂ ಅನ್ನಪೂರ್ಣಾ ದೇವಿ, ಮತ್ತು ವಸ್ತ್ರಪೂರ್ಣಾದೇವಿ ಈ ಈರ್ವರ ಆಗ್ರಹವೂ ಭಾರತದ ಮೇಲೆ ಇರುವಂತೆ ಕಾಣಬರುತ್ತದೆ

ಕೊಲಂಬೋ ಬಳಿ ಬಾಂಬು ಸ್ಫೋಟವಾಗಿ ನೂರು ಮಂದಿಗೆ ಸಾವುಸೋವುಗಳುಂಟಾಗಿವೆ.

ಅಮೋಘ ಗೂರಲು ಔಷಧ

ಸಿದ್ಧ ಮಹಾತ್ಮರಿಂದ ದೊರೆತಿರುವ ಸುಪ್ರಸಿದ್ಧ ಅನುಸೂಯಾ ವಂಶಲಿಕೆಯನ್ನು (ತಾ|| 19–11–45) ಸೌರ್ಣಮಿ ದಿವಸ ಒಂದು ಸಾರಿ ಸೇವಿಸಿದಲ್ಲಿ ಗೂರಲು ರೋಗವು ಪೂರ್ಣ ಗುಣವಾಗುವುದು. ಇಂಗ್ಲೀಷಿನಲ್ಲಿ ಬರೆಯುರಿ.

Sri Sant Sewa Ashram
P. O. Chitrakot (U. P.)

ಟ್ರಸ್ಟ್‌ಬೋರ್ಡ್ ಮೀಟಿಂಗ್

ಈ ತಿಂಗಳು 31 ನೇ ತಾರೀಖು ಬುಧವಾರ 3 ಘಂಟೆಗೆ ಟ್ರಸ್ಟ್‌ಬೋರ್ಡ್ ಮೀಟಿಂಗ್ ನಡೆಯುವುದು.

ನವೆಂಬರ್ 11ನ

ನವೆಂಬರ್ 11 ನೇ ತಾರೀಖು ಬೆಳಿಗ್ಗೆ 11 ಘಂಟೆಗೆ ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ಮೊದಲನೇ ಯುದ್ಧ ಸ್ಮರಣೆಗಾಗಿ ಎರಡು ನಿಮಿಷ ಮೌನವನ್ನಾಚರಿಸಬೇಕೆಂದು ಬ್ರಿಟಿಷ್ ರಾಜರ ಇಚ್ಛೆಯಾಗಿದೆ.

ನೂತನ ಶೋಧನೆ

ಸ್ಪೈಸಿನಲ್ಲಿ ಯುರೇನಿಯಂ ಗಣಿಗಳಲ್ಲಿ ಕೆಲಸಮಾಡುವ ಜಪಾನರು ಅಣುಬಾಂಬು ತಯಾರಿಸಿದ್ದರೆಂದೂ, ಮತ್ತೆ ಒಂದು ವಿಧವಾದ ಕಿರಣಗಳ ಮೂಲಕ ನೂರಾರು ಮೈಲಿಯಾಚೆ ಅಗ್ನಿಯುರಿಯುವುದನ್ನು ಕಂಡುಹಿಡಿದಿರುವರು.

ವಾಷಿಂಗ್ಟನ್, ಅ 27 — ಟ್ರೂಮನ್ನರು ಕೊಟ್ಟ ಹೇಳಿಕೆ ಬಹು ಮುಖ್ಯವಾಗಿಯೂ, ವಿಷಯಗರ್ಭಿತವಾಗಿಯೂ ಇದೆ. ಅಮೇರಿಕಾದ ನೀತಿ ವಿಸ್ತರಿಸಿ ಹನ್ನೆರಡು ಮುಖ್ಯಾಂಶಗಳನ್ನು ವಿವರಿಸಿರುವರು. ಯಾವ ದೇಶದ ಸರ್ಕಾರ ಸ್ಥಾಪನೆಗೂ ಹೊರದೇಶ ಕೈವಾಡವಿಲ್ಲವೆಂದಿರುವರು.

ಂ ಂ

ಜಪಾನ್ ಮೇಲೆ ಮಿತ್ರರು ಉಕ್ಕುಮುಣ ಕಾರ್ಯ ನಡೆಸಿದ್ದಲ್ಲಿ ಚಕ್ರವರ್ತಿಗಳನ್ನ ಇನ್ನೂರು ಮೈಲಿ ದೂರದಲ್ಲಿನ ಒಂಡು ಬೆಟ್ಟದ ಗುಹೆಯಲ್ಲಿಡಲು ನಿರ್ಧಾರವಾಗಿದ್ದಿದು ಪತ್ತೆಯಾಗಿದೆ.

ಂ ಂ

ಸಂಯುಕ್ತ ಅಮೇರಿಕಾದಲ್ಲಿ ಮುಷ್ಕರ ಹಿಡಿದವರ ಸಂಖ್ಯೆ 225000 ಆಗಿದೆ.

ಹೆಂಡತಿಗಾಗಿ ಅತ್ಮಬಲಿ

"ಅನ್ನ ಉಂಡವಳು ರಂಭೆ; ತಾನು ಮುಳುಗಿದ್ದು ಗಂಗೆ" ಎಂಬ ನಾಣ್ಣುಡಿಯನ್ನನುಸರಿಸಿ ಆ ರಂಭೆಯುರಿಗಾಗಿ ಎಷ್ಟೋ ನುಂದಿ ಅನೇಕ ತ್ಯಾಗಗಳನ್ನು ಮಾಡಿರುವರು. ನೋಡಿ (1) ಸುಂದೋಪಸುಂದರು ಹೆಂಗಸಿಗಾಗಿ ಅಲ್ಲವೆ ತಮ್ಮ ಪರಸ್ಪರ ಸ್ನೇಹ ಬಾಂಧವ್ಯಗಳನ್ನೂ ಮರೆತು ಅನನ್ಯವಧರಾದ್ಯ ಅವರು ತಮ್ಮೊಳಗೆ ತಾವೇ ಹೊರಾಡಿ ಸತ್ತದ್ದು (2) ಇಪ್ಪತ್ತನೆಯ ಶತಾಬ್ದದಲ್ಲಿಯೇ ಅಫಘನ್ ರಾಜರಾದ ಅಮುನುಲ್ಲಾ ಖಾನರು ಹೆಂಡತಿಯನ್ನು ಬಿಡ್ಡಲುರಾಜಿಯಿಲ್ಲವೆ ರಾಜ್ಯತ್ಯಾಗವನ್ನು ಮಾಡಿದ್ದು. (3) ಅಷ್ಟಮ ಎಡ್ವರ್ಡರು ಸಾಮ್ರಾಜ್ಯಾಧಿಕಾರವನ್ನು ವಹಿಸಿದ್ದರೂ ತಾನು ಗಾಢವಾಗಿ ಪ್ರೇಮಿಸಿದ ಅಮೇರಿಕ ದೇಶೀಯ ಹೆಂಡತಿಗಾಗಿ ತಾನೆ ರಾಜ್ಯವನ್ನು ತೃಣವಾಗಿ ಎಣಿಸಿ ತ್ಯಜಿಸಿದ್ದು. ಈ ಒಗೆಯ ಒಂದು ಘಟನೆಯು ಈಚಿಗೆ ಮದ್ರಾಸು ನಗರದಲ್ಲಿ ನಡೆಯಿತು. ರಿಜರ್ವ್ ಕಾರ್ಪ್ಸ್‌ನ ಬಲ್ ಮುನಿಸಾಮಿ ಎಂಬಾತನು ಒಬ್ಬ ಹುಡುಗಿಯನ್ನು ಪ್ರೇಮಿಸಿದ್ದನು. ಹುಡುಗಿಯ ಬಂಧುಗಳು ಆ ಹುಡುಗಿಯನ್ನು ಮುನಿಸ್ವಾಮಿಗೆ ಮದುವೆ ಮಾಡಿಕೊಡಲು ಒಪ್ಪಲಿಲ್ಲ ಆ ಹುಡುಗಿಯನ್ನು ವಿವಾಹ ಮಾಡಿಕೊಳ್ಳದೆ ಜೀವವನ್ನಿಟ್ಟುಕೊಂಡಿರುವುದು ವ್ಯರ್ಥವೆಂದು ಭಾವಿಸಿ ಮೈಲಾಪುರ್ ರಿಜರ್ವ್ ಬ್ಯಾಂಕು ಶಾಖೆಯನ್ನು ಕಾಯಲು ಅಧಿಕಾರಿಗಳು ಕಳುಹಿಸಿದ್ದಾಗ ತನ್ನ ಕೈಯಲ್ಲಿನ ತುಪಾಕಿಯನ್ನು ತನ್ನ ಕಡೆಗೇ ತಿರುಗಿಸಿ ಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡನು. ತನು ಒಬ್ಬ ಸಾಮಾನ್ಯ ಪೋಲಿಸ್‌ಭಟನಾದರೂ ಆತ್ಮನ ಪ್ರೇಮ ಸಾಮ್ರಾಜ್ಯಕ್ಕೆ ಅಧಿಪತಿಯೆಂದು ಹೇಳಬಹುದಲ್ಲವೆ

ಪಾಟ್ನಾ ಡಿ || ಬಾರಹಳ್ಳಿಯ ನಾನೂರು ಅರಬಿತ್ತಲೆ ಜನರು ಪಾಟ್ನ ಸಬ್ಡಿವಿಜನ್ ಆಫೀಸರ ಬಳಿಗೆ ಬಂದು ಬಿತ್ತಲೆ ಮುಚ್ಚಿಕೊಳ್ಳಲು ಬಟ್ಟೆಯನ್ನು ಕೇಳಿದರು.

ಂ ಂ

ಅಲಹಾಬಾದಿನಲ್ಲಿ ಚುನಾವಣೆಗಾಗಿ ನಾಲ್ಕು ಸ್ಥಾನಗಳಿಗೆ ಇಪ್ಪತ್ತೂರು ಅಭ್ಯರ್ಥಿಗಳು ನಾಮಪತ್ರ ಹಾಕಿರುವರು.

ಂ ಂ

ಕೇಂದ್ರ ಶಾಸನ ಸಭೆಗೆ ಪ್ರೊ || ರಂಗನಾಥನರು ಪ್ರತಿಸ್ಪರ್ಧಿಯಿಲ್ಲದೆ ಚುನಾಯಿಸಲ್ಪಟ್ಟಿರುವರು.

ಂ ಂ

ಮಲೆಯಾದಲ್ಲಿನ ಜಪಾನಿಗಳಿಗೆ ಅಕ್ಕಿ ರೇಷನ್ ಕಡಿಮೆ ಮಾಡಲಾಗಿದೆ.

ಕಳೆದವಾರ

ಡಚ್ ಈಸ್ಟ್ ಇಂಡೀಸಿಗೆ ಡಚ್ಚರ ಸಹಾಯಕ್ಕೆ ಭಾರತೀಯ ಸೈನ್ಯಗಳನ್ನು ಕಳುಹಿಸಬೇಕೆಂದು ಬ್ರಿಟಿಷ್ ಸರ್ಕಾರದ ಕೇಳಿಕೆಯನ್ನು ಭಾರತ ಸರ್ಕಾರ ನಿರಾಕರಿಸಿದೆಯೆಂದು ಗೊತ್ತಾಗಿದೆ.

ಂ ಂ

ಸರ್ ಬೇವೂರ 15-ವರ್ಷ ಯೋಜನೆಯಲ್ಲಿ 10 ಮಂದಿಯ ಹಳ್ಳಿಗೂ ಒಂದು ಪೋಸ್ಟಾಫೀಸಿನ ಏರ್ಪಾಡಿದೆ.

ಂ ಂ

ಜವಾಹರ ಪತ್ರಿಕೆಗಳು ಸ್ವತಂತ್ರವಾಗಿ ನಡೆಯಬೇಕೆಂದು ಜನರಲ್ ಮೆಕ್ಆರ್ಥರ್ ಆಜ್ಞೆಯಿತ್ತಿದ್ದಾರೆ.

ಂ ಂ

ಸೂರತ್ ನಗರದ ಒಂದು ಪೋಸ್ಟಾಫೀಸಿನಲ್ಲಿ ಏಳು ವರ್ಷಗಳ ಹಿಂದೆ ಹಾಕಿದ್ದ ಕಾಗದವು ಅದೇ ಊರಿನಲ್ಲಿಯ ಮುಸ್ಲಿಂ ಲೀಗ್ ಆಫೀಸಿಗೆ ಈ ತಿಂಗಳು 21 ರಲ್ಲಿ ಕೊಡಲಾಗಿದೆ.

ಂ ಂ

ಸ್ಟಾಲಿನ್ನರು ರಷ್ಯ ಕ್ರಾಂತಿ ದಿನವಾದ ನವೆಂಬರ್ 7 ನೇ ತಾರೀಖಿನ ದಿವಸ ಜಗತ್ತಿನಲ್ಲೇ ಅತ್ಯಂತ ಪ್ರಮುಖವಾದ ಮಹಾ ಪ್ರಕಟಣೆಯೊಂದನ್ನು ಹೊರಡಿಸುವರೆಂದು ಹೇಳಲಾಗಿದೆ.

ಂ ಂ

ಅಪಾದಿತರಾಗಿರುವ ಭಾರತ ರಾಷ್ಟ್ರೀಯ ಸೇನಿಕರು ತಮ್ಮನ್ನು ಕಾಂಗ್ರೆಸ್ಸೇ ರಕ್ಷಿಸಬೇಕೆಂದು ಮತ್ತಾವ ಜಾತಿ ಸಂಸ್ಥೆಯು ಬೇಡವೆಂದು ತಿಳಿಸಿರುವುದಾಗಿ ಹೇಳಲಾಗಿದೆ.

ಂ ಂ

ಇಂಡಿಯನ್ ನ್ಯಾಷನಲ್ ಆರ್ಮಿ ಸಂಬಂಧದ ವಿಚಾರಣೆಯು ಸುಮಾರು 6 ತಿಂಗಳು ನಡೆಯಬಹುದೆಂದು ಹೇಳಲಾಗಿದೆ.

ಂ ಂ

ನಾಲ್ಕನೇ ಯುದ್ಧಪಾತಕಿ ಮುತ್ತು ನಾಜೀ ಕಾರ್ಮಿಕ ಮುಖಂಡ ಲೇ ನೇಣು ಹಾಕಿಕೊಂಡನು.

ಂ ಂ

ಪ್ರಪಂಚ ಸಂಯುಕ್ತ ಸಂಸ್ಥೆ ಸ್ಥಾಪನೆಗೆ 29 ರಾಷ್ಟ್ರಗಳು ರಜುವಾಗಿದೆಯಾ ಇನ್ನು ಅದು ರೂಪುಗೊಂಡಂತಾಯಿತು.

ಅಣು ಶಕ್ತಿಯನ್ನು ಶಾಂತಿ ಸೌಖ್ಯಗಳಿಗಾಗಿ ಉಪಯೋಗಿಸಬೇಕೆಂದು ಬ್ರಿಟಿಷ್ ರಾಜರು ಆತಿಪಿರುವರು

ನಾಗಸಾಕಿಯಲ್ಲಿ ಅಣುಬಾಂಬಿನಿಂದ ಸತ್ತವರ ಜ್ಞಾಪಕಾರ್ಥವಾಗಿ ಸ್ಮಾರಕ ಸ್ತಂಭವನ್ನು ನಿರ್ಮಿಸುವ ಏರ್ಪಾಡು ನಡೆಯುತ್ತಿದೆ.

ಂ ಂ

ಬ್ರಿಟಿಷರೇ ಈಜಿಪ್ಟು ಬಿಟ್ಟು ಹೊರಡಿ ಎಂಬುದಾಗಿ ಕೈಲ್ರೋವಿನ ಫಾದ್ ವಿದ್ಯಾಲಯದ ಮುಂದೆ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ ಘೋಷಣೆಗಳನ್ನು ಕೂಗಿದರು.

ಂ ಂ

ಸೋಲಾಪುರದ ಹೋಟಲುಗಳಲ್ಲಿ ಹಾಲಿನ ಪುಡಿ ಉಪಯೋಗಿಸಲ್ಪಡುವದೆಂದು ತಿಳಿಯಬಂದಿದೆ.

ಂ ಂ

ಭರತಪುರದ ಪ್ರಜಾಮಂಡಲಿ ಕಾರ್ಯದರ್ಶಿ ಶ್ರೀ ರಾಜ ಬಹದ್ದೂರರು ಬಸ್ಮೆಗಿರಿಮಾಡಲ್ಪಟ್ಟಿದಾರೆ.

ಂ ಂ

ಬ್ರಿಟಿಷ್ ರಾಜರು ಮಾಜಿ ಮುಖ್ಯ ಮಂತ್ರಿ ಚರ್ಚಿಲರಿಗೆ ಕ್ಯಾಂಪೇರ್ ಮೆಹಲುಗಳನ್ನು ಸ್ವತಃ ಕೊಟ್ಟಿತುವರು.

ಂ ಂ

ಡೆನ್ಮಾರ್ಕ್ ಮತ್ತು ನಾರ್ವೆ ಮಧ್ಯೆ ಉತ್ತರ ಸಾಗರದ ಅತಿ ಆಳವಾದ ಭಾಗವಾದ ಸ್ಕಾಗೆರಾಕಿನಲ್ಲಿ ಎರಡು ಲಕ್ಷ ಟನ್ ಜರ್ಮನ್ ವಿಷವಾಯುವು ಮುಳುಗಿಸಲ್ಪಡುವುದಾಗಿ ಹೇಳಲಾಗಿದೆ.

ಂ ಂ

ಅರ್ಜೆಂಟೈನಾವು ಹಿಟ್ಲರಿನ ಜರ್ಮನಿಯಂತೆ ಕಾಣಬರುತ್ತಿರುವುದೆಂದೂ ಯಹೂದ್ಯರ ಮೇಲೆ ಹಿಂಸಾಕೃತ್ಯಗಳು ಹೆಚ್ಚಾಗಿರುವುದೆಂದೂ, ಯಹೂದ್ಯರ ವರ್ಧನಕ್ಕೆ ಅಲ್ಲಿಯ ಪೋಲಿಸರ ಸಹಾಯವಿರುವುದಾಗಿ ಸ್ಪಷ್ಟವಾಗಿದೆ.

ಂ ಂ

ಇಂಗ್ಲೆಂಡಿನಲ್ಲಿ ಆದಾಯದ ತೆರಿಗೆಯನ್ನು ಪೌಂಡಿಗೆ ಹತ್ತು ಷಿಲಿಂಗ್ ಇಳಿಸಲಾಗಿದೆ.

ಂ ಂ

ಬೊಂಬಾಯಿ ನಗರ ಮುಸ್ಲಿಂ ಚುನಾವಣೆ ಕ್ಷೇತ್ರದಿಂದ ಮಿ || ಹುಸೇನ್ ಭಾಯ್ ಲಾಲ್ಜಿಯವರು ಕೇಂದ್ರ ಅಸೆಂಬ್ಲಿ ಚುನಾವಣೆಗೆ ಮಿ || ಜಿನ್ನಾರವರಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲುವರು.

ಅಟಂ ಬಾಂಬು, ಶಾಂತಿಯ ಮುಂದಾಳೆಂದು 70 ವರ್ಷಗಳ ಹಿಂದೆಯೇ ಬೊಂಬಾಯಿನ ನ್ಯಾಷನಲ್ ಸ್ಪಿರುಚುಯಲ್ ಅಸೆಂಬ್ಲಿಯು ಬಾಹಾಉಲ್ಲಾರವರು ಭವಿಷ್ಯ ನುಡಿದಿದ್ದರೆಂದು ಹೇಳಲಾಗಿದೆ.

ಂ ಂ ಂ ಂ

ಇಂಡಿಯನ್ ನ್ಯಾಷನಲ್ ಆರ್ಮಿ ಡಿಫೆನ್ಸಿಗೆ ಅನೇಕ ಬಾರ್ ಅಸೋಸಿಯೇಷನ್‌ಗಳೂ ವಕೀಲರೂ ಸಹಾಯವಾಡುವುದಾಗಿ ತಿಳಿಸಿರುವರಂತೆ.

ಂ ಂ ಂ ಂ

ಜಪಾನಿನ ವಿರುದ್ಧ ಅಮೇರಿಕಾಕ್ಕೆ ರಕ್ಷಣೆಗಾಗಿ ಕೆಲ ದ್ವೀಪ ಸಮೂಹಗಳ ಸ್ವಾಸ್ಥ್ಯ ಅಮೇರಿಕಾದ ವಿದೇಶಾಂಗ ಮಂತ್ರಿ ಬೇಡಿದಾಗ ರಷ್ಯಾದ ಮಾಲಟೋವ ನಿಜ ಅಮೇರಿಕಾಕ್ಕೆ ತನ್ನ ರಕ್ಷಣೆಗಾಗಿ ಫಾಸಿಫಿಕ್ಕದಲ್ಲಿ ದ್ವೀಪ ಸಮೂಹಗಳ ನಿಲ್ದಾಣಗಳು ಬೇಕಾಗಿವೆ. ಆದರೆ ರಕ್ಷಣೆಯು ಜಪಾನ ವಿರುದ್ಧವಲ್ಲ ರಷ್ಯಾದ ವಿರುದ್ಧ ಎಂದು ನಗುತ್ತಾ ಹೇಳಿದರು.

ಂ ಂ ಂ ಂ

ಸಂಸ್ಥಾನಗಳಲ್ಲಿ ಪ್ರಜಾಚಳುವಳಿಯು ಜವಾಬ್ದಾರಿ ಸರಕಾರಗಳ ಸ್ಥಾಪನೆಗಾಗಿ, ಪ್ರಜಾಪ್ರತಿನಿಧಿಗಳಿಗೆ ರಾಜ್ಯಾಡಳಿತ ನಹಿಸದಿದ್ದಲ್ಲಿ ರಾಜಮಹಾರಾಜರು ಉಳಿಯಲಾರರು ಎಂದು ಜಯಪುರದಲ್ಲಿ ಸಭೆಯೊಂದರಲ್ಲಿ ಮಾಡಿದ ದಲ್ಲಿ ಶ್ರೀ ನೆಹರೂರವರು ಹೇಳಿದರು.

ಂ ಂ ಂ ಂ

ಅಣುಬಾಂಬಿನ ರಹಸ್ಯವು ಎಲ್ಲಾ ರಾಷ್ಟ್ರಗಳಿಗೂ ಗೊತ್ತಾಗಬೇಕೆಂದೂ ಅಣುಬಾಂಬಿನ ವಿರುದ್ಧ ಬೇರೊಂದು ಬಾಂಬಿನ ತಯಾರಿಕೆಯಾಗಿರುವುದೆಂಬುದು ಹುಚ್ಚುತನವೆಂದೂ ಅಣುಬಾಂಬಿನ ತಯಾರಿಕೆಯಲ್ಲಿ ಸಹವರ್ತಿಸಿದ್ದ ಬ್ರಿಟಿಷ್ ವೈಜ್ಞಾನಿಕರ ಹೇಳಿಕೆಯಾಗಿದೆ.

ಂ ಂ ಂ ಂ

ಸೆಂಟ್ರಲ್ ಅಸೆಂಬ್ಲಿಗೆ ಬೊಂಬಾಯಿ ಪ್ರಾಂತ್ಯದಿಂದ ಇಬ್ಬರೂ, ಮಧ್ಯ ಪ್ರಾಂತ್ಯದಿಂದ ಇಬ್ಬರೂ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾಗಿರುತ್ತಾರೆ. ತಮಿಳು ನಾಡಿನಲ್ಲಿ ವ್ಯಾಪಾರಿ ಕ್ಷೇತ್ರದಿಂದ ಪ್ರತಿಸ್ಪರ್ಧಿಸಬೇಕೆಂದಿದ್ದ ಶ್ರೀ ರತ್ನ ಸಭಾಪತಿ ಮೊದಲಿಯಾರರು ತಾವು ಸ್ಪರ್ಧಿಸುವುದನ್ನು ಬಿಟ್ಟುದಲ್ಲದೆ, ಕಾಂಗ್ರೆಸ್ ಸದಸ್ಯರಾದ ಶ್ರೀ ರಾಮಲಿಂಗಂಷಟ್ಟಿಯಾರರಿಗೆ ಬೆಂಬಲಕೊಡುವವರಾಗಿದ್ದಾರೆ.

——— ———

ಜಾವಾದ ಪರಿಸ್ಥಿತಿಯನ್ನು ಕುರಿತು ಸಾಮ್ರಾಜ್ಯರಕ್ಷಕರ ರೀತಿಯನ್ನು ಪಂಡಿತ್ ಜವಾಹರಲಾಲ್ ನೆಹರು ಖಂಡನೆಮಾಡಿರುವರು.

....

ಹೈದರಾಬಾದಿನಲ್ಲಿ ಅಭಿವೃದ್ಧಿ ಕಾರ್ಯಕ್ಕೆ 347 ಕೋ ಯೋಜನೆ ತಯಾರಾಗಿದೆ.

....

ಬರ್ಲಿನ್ನಿನಲ್ಲಿ ಈವರೆಗಿದ್ದ ನಾಜೀಶಾಸನಗಳನ್ನೆಲ್ಲಾ ನಿರ್ನಾಮಗೊಳಿಸುಲಾಗಿದೆಯೆಂದು ಹೇಳಲಾಗಿದೆ.

ಂ ಂ ಂ ಂ

ನ್ಯೂರೆಂಬರ್ಗಿನಲ್ಲಿ 23 ಮಂದಿ ನಾಜಿಯುದ್ಧ ಪಾತಕಿಗಳ ವಿಚಾರಣೆ ನಡೆಯುತ್ತಿದೆ.

ಂ ಂ ಂ ಂ

ಕಟಕ್ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ 32 ಮಂದಿ ಕಾಂಗ್ರೆಸ್ ಸದಸ್ಯರು ಪ್ರತಿಸ್ಪರ್ಧಿಗಳಿಲ್ಲದೆ ಚುನಾವಣೆಯಾಗಿರುತ್ತಾರೆ.

ಂ ಂ ಂ ಂ

ಬಟೇವಿಯಾದಲ್ಲಿ ಡಚ್ ನಾಗರೀಕ ಅಧಿಕಾರಿಗಳ ಆಡಳಿತದಲ್ಲಿ ಇಂಡೋನೇಷಿಯರ್ ಕೈದಿಗಳು ತೊಂದರೆಯನ್ನನುಭವಿಸುತ್ತಿದ್ದುದನ್ನು ಬ್ರಿಟಿಷರು ಪರೀಕ್ಷಿಸಿ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವರು.

ಸಾಮ್ರಾಜ್ಯಗಳ ಪರೀಕ್ಷೆಯ ಕಾಲ

ಪ್ರಪಂಚದ ಎರಡನೇ ಮಹಾಯುದ್ಧವು ನುಗಿದಿದೆ ಪ್ರಪಂಚದ ಮಾನವನ ನಾಲ್ಕು ವಿಧ ಸ್ವಾತಂತ್ರ್ಯಗಳಿಗಾಗಿ ಈ ಯುದ್ಧವು ಹೋರಾಡಲ್ಪಡುತ್ತಿದೆಂದು ಆಗಿನ ಅಧ್ಯಕ್ಷ ರೂಸ್ವೆಲ್ಟರು ಸಾರಿದರು. ಮಾನವರಲ್ಲನೇಕರು ಈ ಸಾರುವಿಕೆಯನ್ನು ನಂಬಿದರು. ಹಾಗೆ ನಂಬಿದ ಜನರು ಜರ್ಮನಿ ಮತ್ತು ಜಪಾನು ವಿರುದ್ಧ ತಮ್ಮ ದೇಶಗಳಲ್ಲಿ ಗತ್ಯಿನ ಯುದ್ಧವನ್ನು ಪ್ರಾರಂಭಿಸಿ ಅವುಗಳನ್ನು ಹಣ್ಣಿಗೆ ತಂದರು. ಜಪಾನು ಜರ್ಮನಿಗಳು ಅನೇಕ ಸಾಮ್ರಾಜ್ಯಗಳನ್ನು ಮಣ್ಣು ಮುಕ್ಕಿಸಿದ್ದರು. ಹಾಲೆಂಡು ಫ್ರಾನ್ಸುಗಳನ್ನು ರಸಾತಳಕ್ಕೆ ತಂದಿದ್ದವು ಇಂಗ್ಲೆಂಡನ್ನು ತನೇ ತರಗತಿಯ ರಾಷ್ಟ್ರವನ್ನಾಗಿ ಮಾಡಿದವು. ಕಡೆಗೆ ಅಮೆರಿಕಾ ಮತ್ತು ರಶಿಯಾಗಳು ಈ ಅಕ್ಷ ರಾಷ್ಟ್ರಗಳನ್ನು ಮಟ್ಟು ಹಾಕಿದನಂತರ ಈ ಮೂರು ಸಾಮ್ರಾಜ್ಯಗಳು ತಿರುಗಿ ತಲೆಯೆತ್ತಿ ತಮ್ಮ ಅಂಕಿತ ದೇಶಗಳನ್ನು ತಿರುಗಿ ಸ್ವಾಧೀನ ಪಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಲಿವೆ. ಹಾಗೆ ಪ್ರಯತ್ನ ಮಾಡಿ ಫ್ರಾನ್ಸು ತನ್ನ ಸಾಮ್ರಾಜ್ಯವನ್ನು ಸಿರಿಯಾ ಮತ್ತು ಲೆಬ್ನಾನ್‌ಗಳಲ್ಲಿ ಸ್ಥಾಪಿಸಿಕೊಳ್ಳಲು ನೋಡಿತು. ಆದರೆ ಈ ಎರಡು ದೇಶಗಳಿಗೆ ಅತಬರ ಲೀಗು ಬೆಂಬಲ ಬಂದದ್ದರಿಂದ ಫ್ರಾನ್ಸಿನ ಈ ಮನೋರಥವು ಭಗ್ನವಾಯಿತು. ಹಾಗೆ ಭಗ್ನವಾದನಂತರ ಫ್ರಾನ್ಸು ಇಂಡೋಚೀನಾದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಲು ಹೊಂಟಿತು. ಆದರೆ ಅಲ್ಲಿಯ ಜನರಿಗೆ ಜಪಾನು ಸ್ವಾತಂತ್ರ್ಯದ ಮಂತ್ರವನ್ನು ಉಸದೇಶಿಸಿ ಅವರಿಗೆ ಆಯುಧಗಳನ್ನೊದಗಿಸಿ ಕೊಟ್ಟಿದ್ದರಿಂದ ಅವರು ಫ್ರಾನ್ಸಿನ ಪ್ರಯತ್ನಕ್ಕೆ ವಿರೋಧವಾಗಿ ನಿಂತು ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರು. ಫ್ರಾನ್ಸಿನಂತೆ ಹೇಳಹೆಸರಿಲ್ಲದೆ ಹಾಲೆಂಡು ಕೂಡ ಈಗ ತಿರುಗಿ ತನ್ನ ಸಾಮ್ರಾಜ್ಯವನ್ನು ಹೊರಬರತ್ತದೆ ಜಾವಾ ಮುಂತಾದ ಹಾಲೆಂಡಿನ ಈ ಪ್ರಯತ್ನಕ್ಕೆ ಮುಟ್ಟುಗೋಲು ಹಾಕಲಿಕ್ಕೆ ಪ್ರಯತ್ನಿಸುತ್ತಲಿವೆ. ಈ ರಾಷ್ಟ್ರಗಳ ರಾಷ್ಟ್ರೀಯತ್ವವು ಪ್ರಬಲಿಸಿ ಅಲ್ಲಿ ಫ್ರೆಂಚ್ ಮತ್ತು ಹಾಲೆಂಡು ಸಾಮ್ರಾಜ್ಯಗಳು ನಾಶವಾದರೆ ಇಂಡಿಯಾ ಬರ್ಮಾ ಸಿಲೋನು ಮಲೆಯು ಮುಂತಾದ ವುಗಳಲ್ಲಿ ತಾನು ನೆಲೆಸಿ ಸಾಮ್ರಾಜ್ಯವದಗಿ ಬಾಳಲಿಕ್ಕೆ ಎಲ್ಲಿ ಸಂಚುಕಾರ ಬರುತ್ತದೋ ಎಂದು ಇಂಗ್ಲೆಂಡು ತಿಳಿದುಕೊಂಡು ಆ ದೇಶಗಳಲ್ಲಿ ಜಪಾನರ ಶರಣಾಗತಿಯನ್ನು ಸ್ವೀಕರಿಸಲಿಕ್ಕೆ ತನ್ನ ಸೈನ್ಯವನ್ನು ಅಲ್ಲಿ ಶಾಂತಿಸ್ಥಾಪನೆ ಮಾಡಲಾಗುತ್ತದೆಂದು ಹೇಳುತ್ತ ಇಂಗ್ಲೆಂಡು ತನ್ನ ಸೈನ್ಯವನ್ನು ಭಂದೇ ಅಲ್ಲದೆ ಹಿಂದೀ ಸೈನ್ಯವನ್ನೂ ಕೂಡ ಆಲ್ಲಿಯ ರಾಷ್ಟ್ರೀಯವಾದಿಗಳ ಮೇಲೆ ಉಪಯೋಗಿಸುವುದು ಕೇವಲ ಅನುಚಿತವಾಗಿರುವುದು ಈಗ 200 ವರ್ಷಗಳಿಂದ ಇಂಗ್ಲೆಂಡಿನ ಕೃತಿಯು ಇದೇ ರೀತಿ ಮಾನವ ಸ್ವಾತಂತ್ರ್ಯಾಪಹರಣದಲ್ಲಿ ತೊಡಗಿರುವುದು ಇದಕ್ಕಾಗಿ ಅದಕ್ಕೆ ಪ್ರತೀಕಾರ ದೇವತೆಯು ಕಾದು ಕೊಂಡು ಕುಳಿತಂತೆ ತೋರುತ್ತದೆ.

ಆಸ್ಟ್ರೇಲಿಯಾದಲ್ಲಿ ಅಲ್ಲಿಯ ಕೂಲಿಕಾರರು ಜಾವಾಕ್ಕೆ ಸರಬರಾಯಿ ತೆಗೆದುಕೊಂಡು ಹೋಗಲು ಕಾದಿರುವ ಡಚ್ಚ ಹಡಗುಗಳಲ್ಲಿ ಕೆಲಸ ಮಾಡುದಂತೆ ಮುಷ್ಕರ ಹಿಡಿದಿರುವರು. ಹಿಂದೀ ಸೈನಿಕರು ಯಾನದಕ್ಕಾಗಿ ತಮ್ಮ ಮದ್ದುಗುಂಡುಗಳನ್ನು ಇಂಡೋಚೀನಿಯರ ಮೇಲೆ ಉಪಯೋಗಿಸಬೇಕೆಂದು ಶಂಖಿಸುತ್ತಿರುವರು ಜಾವಾ ಮತ್ತು ಇಂಡೋಚೀನಾಗಳಲ್ಲಿ ಅಲ್ಲಿಯ ಜನರು ಶ್ವೇತಜನರ ವಿರುದ್ಧ ಅಸಹಕಾರಶಸ್ತ್ರವನ್ನು ಉಪಯೋಗಿಸಿ ಅವರಿಗೆ ಯಾವ ಸಾಮಾನು ಕೂಡ ದೊರೆಯದಂತೆ ಮಾಡುತ್ತಿರುವರು. ಇದನ್ನೆಲ್ಲ ಅಮೇರಿಕವು ತಾಟಸ್ಥ್ಯ ವಹಿಸಿ ನೋಡುತ್ತಿರುವುದು. ಈ 'ದಂಗೆ' ಅಡಗುವನರೆಗೂ ತಾವು ಯಾವ ಸಹಾಯವನ್ನೂ ಮಾಡಲು ಒಪ್ಪಿಸುವುದಿಲ್ಲವೆಂದು ಡಚ್ ಸರ್ಕಾರವು ಪ್ರಕಟಿಸಿದೆ. ಜಾವಾದಲ್ಲಿಯ ಡಚ್ ಸೈನ್ಯವು ಡಚ್ ಸರ್ಕಾರದ ಈ ಕೃತಿಯ ನಿಷೇಧಾರ್ಥವಾಗಿ ತನ್ನ ಕೇಸಕ್ಕೆ ರಾಜೀನಾಮೆ ಕೊಟ್ಟು ಹಾಲೆಂಡು ತನ್ನ ಸ್ವಾತಂತ್ರ್ಯಕ್ಕೆ ಅದೇ ಸ್ವಾತಂತ್ರ್ಯವನ್ನು ಜಾವಾಕ್ಕೆ ಕೊಡಲು ತಿರಸ್ಕರಿಸುವುದು ಅನುಚಿತವೆಂದು ಹೇಳಿರುವನು. ಬ್ರಿಟಿಷ್ ಪತ್ರಿಕೆಗಳೆಲ್ಲವೂ ತಮ್ಮ ಸರ್ಕಾರದ ಕೃತಿಯನ್ನು ಸಮರ್ಥಿಸುತ್ತಾ ಅಲ್ಲಿ ಶಾಂತಿ ನೆಲೆಸುವವರೆಗೂ ಬ್ರಿಟಿಷರು ತಮ್ಮ ಸೈನ್ಯವನ್ನು ಇಡುವುದು ಅವಶ್ಯಕವೆಂದು ಹೇಳುತ್ತಿರುವವು. ಅಶಾಂತಿಯಿದ್ದರೆ ದಂಗೆಯೆಂತಲೂ, ಶಾಂತತೆಯಿದ್ದರೆ ಸ್ವರಾಜ್ಯದ ಬೇಡಿಕೆಯಿಲ್ಲದೆ ಈ ಜನಾಂಗಗಳು ವಿದೇಶಿ ಪ್ರಭುತ್ವವನ್ನು ನುನ್ನಿಸುತ್ತಲಿವೆಯೆಂದು ಹೆಳುವುದು ಈ ಪತ್ರಿಕೆಗಳ ಪದ್ಧತಿಯಾಗಿಯೇ ಪರಿಣಮಿಸಿದೆ. ಅಂತೂ ಈ ಫಾಸಫಿಕ್ಕದಲ್ಲಿ ಸ್ವಾತಂತ್ರ್ಯ ಯುದ್ಧವು ನಡೆಯುತ್ತಲೇ ಇದೆ. ಇಲ್ಲಿ ಫ್ರೆಂಚರು ಮತ್ತು ಡಚ್ಚರು ತಮ್ಮ ಸಾಮ್ರಾಜ್ಯವನ್ನು ಇಂಗ್ಲೀಷ್ ಸಹಾಯದಿಂದ ತಿರುಗಿ ಸಂಪಾದಿಸಿಕೊಳ್ಳಲು ಶಕ್ತರಾದರೆ ಈ ಎರಡನೆ ಪ್ರಪಂಚ ಮಹಾಯುದ್ಧವು ಜಯಸ್ಪದನಾಗಿ ಕೊನೆಗೊಂಡುದು ವ್ಯರ್ಥವೆಂದು ಅಲ್ಲಿಯ ಜನರು ತಿಳಿದುಕೊಳ್ಳುವುದರಲ್ಲಿ ಏನೂ ಆಶ್ಚರ್ಯವಲ್ಲ. ಇಂತಹ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯದ ಪ್ರೇಮಿಯಾದ ಅಮೇರಿಕಾಕ್ಕೆ ಒಂದು ಜವಾಬ್ದಾರಿಕೆಯನ್ನು ನಿರ್ವಹಿಸಲು ಅದು ಈಗ ಸಿದ್ಧವಿದೆಯೇ ? ಪ್ಯಾಲಿ ಸ್ಥಾನದಲ್ಲಿ ಯಹೋದಿಯರ ಬೆಂಬಲಕ್ಕೆ ಬಂದಂತೆ ಅಮೇರಿಕಾವು ಜಾವಾ ಮತ್ತು ಇಂಡೋಚೀನಾದ ಜನರ ಬೆಂಬಲಕ್ಕೆ ಬರುವುದೇ ? (ನ. ಸಂ)

ಸಾಯಿ ಬಾಬರ ಮಹಾತ್ಮೆ

ಪ್ರತಿಯೋರ್ವ ಮಹಾತ್ಮನಿಗೆ ಕಷ್ಟಗಳು ಬಂದಿವೆ. ಪ್ರತಿಯೋರ್ವ ಮಹಾತ್ಮನನ್ನು ಜನರು ಮೊದಲು ದ್ವೇಷಿಸಿದ್ದುಂಟು. ಸಾಯಿಬಾಬಾರೂ ಇದಕ್ಕೆ ಹೊರತಾದವರಲ್ಲ. ಸಾಯಿಬಾರು ಜನಾದರ ಹೊಂದುತ್ತಿರುವುದನ್ನು ಂಡು, ಕೆಲವರಲ್ಲಿ ದ್ವೇಷಾಸೂಯೆಗಳು ಚ್ಚಿದುವು ಒಮ್ಮೆ, ಆ ಸಂಕುಚಿತ ದ್ಧಿಯ ಜನರು, ಬಾಬಾರವರಿಗೆ, ದೀಪ ಉರಿಸಲು ಎಣ್ಣೆಕೊಡಲೊಪ್ಪಲಿಲ್ಲ. ಬಾಬಾರವರು ಬೇಸರಗೊಳ್ಳಲಿಲ್ಲ ತಾನಾಗಿ ಯಾರೊಡನೆಯೂ ಎಣ್ಣೆ ಬೇಡ ಹೋಗಲಿಲ್ಲ. ಆದರೆ ಮರುದಿನ ಜನರು ಬರುವಾಗ ದೀಪಗಳು ಉರಿಯುತ್ತಿದ್ದವು. ಎರಡು ದಿನಗಳತನಕ ದೀಪಗಳು ಬಂದೇ ಸಮನೆ ಉರಿದವು. ಮತ್ತೆ ನೋಡಲಾಗಿ ಆ ದೀಪಗಳಲ್ಲಿ ಎಣ್ಣೆ ಇರದೆ ಬರೇ ನೀರು ಮಾತ್ರ ಇತ್ತು. ನೀರಿನಿಂದಲೇ ಬಾಬಾರವರು ದೀಪಾವಳಿ ಮಾಡಿದ್ದನ್ನು ಕಂಡು ಜನರು ಏಸ್ಮಯಗೊಂಡರು. ಆ ಮತ್ಸರಿಕೆಗಳೆಲ್ಲ ಅಂದಿನಿಂದ ಬಾಬಾರವರ ವಿಧೇಯ ಅನುಯಾಯಿಗಳಾದರು.

ಒಮ್ಮೆ ಬಾಬಾರವರು ತಮ್ಮ ಮುಂದಿರುವ ಹೋಮಕುಂಡದೊಳಗೆ ಕೈಹಾಕಿದುದನ್ನು ಕಂಡು ಶಿಷ್ಯರು ಬೆರಗಾದರು. ಶಿಷ್ಯರು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಲು, ಬಾಬಾರವರು 'ಈಗ ಸ್ವಲ್ಪ ಮುಂಚಿವಾಗಿ ಓರ್ವ ಹೆಂಗಸು ಅನತಿದೂರದಲ್ಲಿರುವ ಒಂದು ಮನೆಯಲ್ಲಿ ತನ್ನೊಂದಿಗೆ ಮಗುವನ್ನು ಇರಿಸಿಕೊಂಡು ಒಲೆಯ ಮುಂದೆ ಬೆಂಕಿ ಮಾಡುತ್ತಿರಲು ಅಜಾಗ್ರತೆಯಿಂದ ಮಗುವು ಒಲೆಗೆ ಬಿತ್ತು. ಆ ಮಗುವನ್ನು ರಕ್ಷಿಸಲು ನಾನು ಈ ಹೋಮಕುಂಡದಲ್ಲಿ ಕೈ ಹಾಕಿದೆ' ಎಂದರು. ವಿಚಾರಿಸಿ ನೋಡಲಾಗಿ ಎಲ್ಲಿಯೋ ಈ ಘಟನೆಯು ನಡೆದುದು ರುಜುವಾತಾಯಿತು.

ಬಾಬಾರವರ ಜೀವನದಲ್ಲಿ ಹೆಣ್ಣು ಮತ್ತು ಹೊನ್ನಿಗೆ ಸ್ಥಾನವಿರಲಿಲ್ಲ. ಶಿರ್ದಿ ಆಶ್ರಮಕ್ಕೆ ಬಂದು ನಿತ್ಯವೂ ರಾಶಿರಾಶಿಯಾಗುತ್ತಿದ್ದ ದ್ರವ್ಯವು ದೀನ ದರಿದ್ರರ ಸೇವೆಗಾಗಿ ವಿನಿಯೋಗವಾಗುತ್ತಿತ್ತು.



1940 ರಲ್ಲಿ ಜಪಾನರ ವಶದಲ್ಲಿದ್ದ ರಾಜ್ಯಗಳು

ಸಿಂಗಪುರದ ಶರಣಾಗತಿ

ರ ಕ್ತ ವೃ ದ್ಧಿ ಗೆ — ಧಾ ತು ಪು ಷ್ಟಿ ಗೆ

ಶ ಕ್ತಿ ಸು ಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಆ ಮ ಶಂ ಕೆ
ಅ ತಿ ಸಾ ರ ಗ ಳಿ ಗೆ
.... ಖಾಶ್ರಿ ....
ಗು ಣ ಕಾ ರಿಯಾ ದ

ಡಿಸೆಂಟಿಸೆಡ್

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.

— ಸ್ಟಾಕಿಸ್ಟರು —

ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.

— ಹಂಚುವವರು —

ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

AT Opera—

3 rd Week

ರಂಜಿತ್, ಟಿ. ಆರ್. ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

Morning Shows
From 26-10-45

In Old California

At Ranjit Humayun

8 ನೇ ವಾರ

ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನರ್ಗಿಸ್,, ಷಾ ನವಾಸ್
ಪಾತ್ರವಹಿಸಿರುವರು

ಸುಖ ಆರೋಗ್ಯ ಆನಂದದಾಯಕ



ಜೀ ವಿ ತ ಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಟ್ಟ ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಪ್ರಸಿದ್ಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲ್ಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.